

# ರಂಗಸಂಗೀತದ ಪರಮಪದ ಹಾರ್ಮೋನಿಯಂನ ಶಿವಸೌಂದರ್ಯ

**ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ಆರ್. ಪರಮಶಿವನ್ ಅವರದೊಂದು ಮಧುರ ಅಧ್ಯಾಯ. ನಾಡಿನ ಪ್ರಮುಖ ಹಾರ್ಮೋನಿಯಂ ವಿದ್ವಾಂಸರಲ್ಲೊಬ್ಬರಾಗಿದ್ದ ಅವರ ಕಂಠದಲ್ಲಿ ಸಾವಿರಾರು ಗೀತೆಗಳಿದ್ದವು. ಪರಮಶಿವನ್ ಅವರ ನಿಧನದ ಮೂಲಕ (ಡಿ. 31, 2020) ವೃತ್ತಿ ರಂಗಭೂಮಿಯ ಮಹಾನ್ ಪ್ರತಿಭೆಯೊಂದು ತೆರೆಮರೆಗೆ ಸಂದಿದೆ.**

■ **ಗುಡಿಹಳ್ಳಿ ನಾಗರಾಜ**
ಚಿತ್ರ: ಕೃಷ್ಣಕುಮಾರ್ ಪಿ.ಎಸ್.

‘ರಂಗಸಂಗೀತ’ ವೃತ್ತಿರಂಗಭೂಮಿಯ ಅಂತರ್ಜಲ, ಅಂತೆಯೇ ನಾಟಕಗಳ ಜೀವಸೆಲೆ. ಆ ನದಿಗುಂಟ ದೀರ್ಘನಡಿಗೆ ಹಾಕಿದ ಆರ್. ಪರಮಶಿವನ್‌ಗೆ ಅದರ ಬಾಗುಬಳಕು ಚೆನ್ನಾಗಿ ಗೊತ್ತು. ಪರಮಶಿವನ್ ಹಾರ್ಮೋನಿಯಂ ಪರಿಣತರು. ಪಿಟೀಲು ನಿಷ್ಣಾತರು. ವೀಣೆಯ ವಿದ್ವಾಂಸರು. ಸಾರಂಗಿ ಒಲಿಸಿಕೊಂಡವರು. ಹತ್ತಾರು ವಾದ್ಯಗಳಲ್ಲಿ ಪಡೆದ ವಿದ್ವತ್ತನ್ನು ರಂಗಗೀತೆಗಳ ಉನ್ನತಿಗೆ ಅವರು ಬಳಸಿದರು. ಜತೆಗೆ ಉತ್ತಮ ಹಾಡುಗಾರರು. ಮಧುರಕಂಠ. ಭಾವಪೂರ್ಣ ಹಾಡುಗಾರಿಕೆ. ಸಂಗೀತದ ತಮ್ಮ ವಿದ್ವತ್ತು ಮತ್ತು ಪ್ರತಿಭೆಯಿಂದಾಗಿ ನಟ ದಿಗ್ಗಜರೊಂದಿಗೆ ಸಾಕಷ್ಟು ಆಟ ಆಡಿದ್ದಾರೆ, ಆಡಿಸಿದ್ದಾರೆ. ಆ ದಿಗ್ಗಜರೂ ಪರಮಶಿವನ್ ಅವರ ಬೆವರಿಳಿಸಿದ್ದಾರೆ.

ಸಂಪೂರ್ಣ ರಾಮಾಯಣ ನಾಟಕದಲ್ಲಿ ರಾಮನನ್ನು ಕುರಿತ ಆಂಜನೇಯನ ‘ಶ್ರೀರಾಮನೆ ನಿನ್ನಯ ಕರುಣಾರಸ’, ಸಾಹುಕಾರ ನಾಟಕದ ‘ನವಮಾಸ ಗರ್ಭಧಾರಣೆ ಮಾಡಿ’, ಮಕ್ಮಲ್ ಟೋಪಿ ನಾಟಕದ ‘ಹೇಳಿದ ಹಾಗೆ ಕೇಳುವುದೊಂದೆ ಹೆಂಡತಿ ಹೃದಯವ ಗೆಲ್ಲುವ ಹಾದಿ’, ಸಂಸಾರನೌಕೆಯ ‘ಸುಳ್ಳುಪಳ್ಳು ಎಲ್ಲಾ ಸೇರಿಸ್ಕೊಂಡು ಪುರಾಣ ಹೇಳ್ಕೊಂಡು’ ಮುಂತಾದ ಹಾಡುಗಳನ್ನು ತೊಂಬತ್ತರ ವಯಸ್ಸಿನಲ್ಲಿ ಹಾಡುತ್ತಿದ್ದರೆ ಮೆಚ್ಚುಗೆಯ ಮಹಾಪೂರವೇ ಹರಿಯುತ್ತಿತ್ತು. ಇಂತಪ್ಪ ಪರಮಶಿವನ್ ಹಳೇ ಮೈಸೂರು ಭಾಗದ ಪ್ರಮುಖ ನಾಟಕ ಕಂಪನಿಗಳಲ್ಲಿ ಹಾರ್ಮೋನಿಯಂ ವಾದಕರಾಗಿ, ರಾಗಸಂಯೋಜಕರಾಗಿ ದೀರ್ಘ ಅವಧಿಗೆ ಸೇವೆ ಸಲ್ಲಿಸಿದ್ದಾರೆ.

ಇದೆಲ್ಲ ಪರಮಶಿವನ್ ಅವರ ಸಾಧನೆಯ ಒಂದು ತೂಕ. ರಂಗಗೀತೆಗಳ ಕುರಿತ ಅವರ ಸ್ಮರಣಶಕ್ತಿ ಮತ್ತೊಂದು ತೂಕ. ಹಳೇಮೈಸೂರು ಭಾಗದ ರಂಗಗೀತೆಗಳ ರಾಗಸಂಯೋಜನೆ ಅವರ ಬೆರಳ ತುದಿಯಲ್ಲಿದ್ದರೆ, ಹಾಡಿನ ಸಾಹಿತ್ಯ ನಾಲಿಗೆ ಮೇಲಿತ್ತು. ನೆನಪಿನಲ್ಲಿ ಉಳಿದ ಎಲ್ಲ ಹಾಡುಗಳನ್ನು ತಮ್ಮ ಶಿಷ್ಯ ಎಚ್.ಜಿ. ಶಿವಲಿಂಗಮೂರ್ತಿಗೆ ಹೇಳಿ ಬರೆಸಿದ್ದಾರೆ. ಸ್ವರ ಪ್ರಸ್ತಾರದೊಂದಿಗೆ ಹಾಗೆ ಬರೆದುಕೊಂಡ ಹಾಡುಗಳ ಸಂಖ್ಯೆ 1260 ದಾಟಿದೆ. ರಂಗಭೂಮಿಯ ಮತ್ತಷ್ಟು ಹಿರಿಯ ದಿಗ್ಗಜರಿಂದ ಕೇಳಿ ಪಡೆದ ಹಾಗೂ ಲಿಖಿತ ರೂಪದಲ್ಲಿ ದೊರೆತ ಮತ್ತಷ್ಟು ಹಾಡುಗಳು ಅಂದರೆ 1240 ಹಾಡುಗಳನ್ನು ಪೌರಾಣಿಕ ನಾಟಕಗಳ ಪರಿಚಾರಕ ಎಚ್.ಎಸ್. ಗೋವಿಂದಗೌಡರು ಸಂಗ್ರಹಿಸಿ ರಂಗಗೀತೆಗಳ ಸಂಪುಟಗಳನ್ನು ಹೊರತಂದಿದ್ದಾರೆ.

## ನಾಲ್ಕನೇ ವರ್ಷದಲ್ಲೇ ರಂಗಪ್ರವೇಶ

ಮೈಸೂರಿನ ಕೃಷ್ಣಮೂರ್ತಿರುಕ್ಮಿಣಮ್ಮ ದಂಪತಿಗೆ